1481 (1893) ಶ್ರೀ ಮುನಿಯಪ್ಪ ಎಸ್ ಎಂ (ಚಿಕ್ಕಬಳ್ಳಾಪುರ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮರಳು ದಂಧೆಯಿಂದ ಮನೆ ಕಟ್ಟುವ ನಾಗರೀಕರಿಗೆ, ಸರ್ಕಾರದ ಕ್ರಮಗಳಿಂದ ಹಾಗೂ ಅಧಿಕಾರಿಗಳಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಕೆರೆಗಳಲ್ಲಿ ಮರಳು ತೆಗೆಯುವುದರಿಂದ ಸರ್ಕಾರಕ್ಕೆ ತೊಂದರೆ ಇದೆಯೇ,

ಇ) ಹಾಗಿದ್ದಲ್ಲಿ, ಸರ್ಕಾರದ ಕೆರೆಗಳಲ್ಲಿ ಹೂಳು ತೆಗೆಯಲು ಲಕ್ಷಾಂತರ ರೂ ಖರ್ಚು ಮಾಡುತ್ತಿದ್ದು, ಸಾರ್ವಜನಿಕರು ಕೆರೆಗಳಲ್ಲಿ ಮರಳು ತೆಗೆಯುವುದರಿಂದ ತೊಂದರೆ ಇದೆಯೇ,

ಈ) ಸಾರ್ವಜನಿಕರು ಕೆರೆಗಳಲ್ಲಿ ಮರಳು ತೆಗೆಯುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು)

ಅ) ಜಿಲ್ಲೆಯಲ್ಲಿ ಮರಳು ದಂಧೆಯಿಂದ ಮನೆ ಕಟ್ಟುವ ನಾಗರೀಕರಿಗೆ, ಸರ್ಕಾರದ ಕ್ರಮಗಳಿಂದ ಹಾಗೂ ಅಧಿಕಾರಿಗಳಿಂದ ತೊಂದರೆಯಾಗುತ್ತಿರುವುದು ಇದುವರೆವಿಗೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿರುವ ಬಗ್ಗೆ ಗಮನ ಹರಿಸಿ, ಮರಳು ಗಣಿಗಾರಿಕೆಗೆ ಹೆಚ್ಚಿನ ಉತ್ತೇಜನ ನೀಡಬಾರದೆಂಬ ಅಂಶದ ಮೇಲೆ ಜಿಲ್ಲೆಯ ಮರಳು ಮಾನಿಟರಿಂಗ್ ಸಮಿತಿಯು ಜಿಲ್ಲೆಯಲ್ಲಿನ ಮರಳು ಸಾಗಣೆ ಮತ್ತು ಗಣಿಗಾರಿಕೆ ನಿರ್ಬಂಧವಿರುತ್ತದೆ ಆದರೆ ಜಿಲ್ಲೆಯ ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗಿರುವುದಿಲ್ಲ

ಆ) ಕೆರೆಗಳಲ್ಲಿ ವೈಜ್ಞಾನಿಕ ಶಿಫಾರಸ್ಸುಗಳಂತೆ ಒಂದು ಮೀಟರ್‌ವರೆಗೆ ಮರಳು ಗಣಿಗಾರಿಕೆ ನಡೆಸಿದ್ದಲ್ಲಿ ಯಾವುದೇ ರೀತಿಯ ತೊಂದರೆಗಳು ಉಂಟಾಗುವುದಿಲ್ಲ

ಇ) ಇಲ್ಲ

ಈ) ಸಾಮಾನ್ಯವಾಗಿ ಎಲ್ಲಾ ಕೆರೆಗಳಲ್ಲಿ ಮರಳು ಲಭ್ಯತೆಯಿರುವುದಿಲ್ಲ ಹೆಚ್ಚಿನ ಕೆರೆಗಳಲ್ಲಿ ಜೇಡುಮಣ್ಣಿನ ಲಭ್ಯತೆಯಿರುತ್ತದೆ ಕೋಲಾರ ಜಿಲ್ಲೆಯ ಮರಳು ಮಾನಿಟರಿಂಗ್ ಸಮಿತಿಯ ಸಭೆಯಲ್ಲಿ ಇತ್ತೀಚೆಗೆ 2006–07ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಸರಾಸರಿ ಮಳೆಯ ಪ್ರಮಾಣ ತುಂಬಾ ಕಡಿಮೆಯಾಗಿರುವುದರಿಂದ ಹಾಗೂ ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ ಮರಳು ಗಣಿಗಾರಿಕೆಗೆ ಆಕ್ಷೇಪಣೆಗಳಿರುವುದರಿಂದ, ಸಧ್ಯಕ್ಕೆ ಜಿಲ್ಲೆಯಲ್ಲಿ ಕೆರೆಗಳಲ್ಲಿ ಹಾಗೂ ನದಿ ಪಾತ್ರಗಳಲ್ಲಿ ಮರಳು ಗಣಿಗಾರಿಕೆಗೆ ನಿರ್ಬಂಧ ವಿಧಿಸಲಾಗಿರುತ್ತದೆ

1482 (1896) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕು ಬೆಳವಾಗು–ಅರೂಡಿ, ಬೆಳವಾಗು–ಕನಕವಾಡಿ, ಗುಂಡಂಗೆರೆ–ಹೊಸಹಳ್ಳಿ, ಕೊಡಿಗೇಹಳ್ಳಿ, ಕನಕೇನಹಳ್ಳಿ ಈ ನಾಲ್ಕು ಲೋಕೋಪಯೋಗಿ ಇಲಾಖೆಯ ರಸ್ತೆಗಳು ಅಸ್ತಿತ್ವದಲ್ಲಿ ಇವೆಯೇ,

ಆ) ಹಾಗಿದ್ದಲ್ಲಿ, ಇದರ ನಿರ್ವಹಣೆ ಮತ್ತು ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು,

ಇ) ಈ ಕಾಮಗಾರಿಗೆ ಬಿಡುಗಡೆ ಮಾಡಲಾದ ಹಣವೆಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಪ್ರಸ್ತಾಪಿಸಿರುವ ಪ್ರಶ್ನೆಯ ಸರಿಯಾದ ರಸ್ತೆಗಳ ನಾಮಾಂಕಿತ ಹೀಗಿರುತ್ತದೆ

ಬೆಳವಂಗಲ	–	ಅರೂಡಿ
ಬೆಳವಂಗಲ	–	ಕನಸವಾಡಿ
ಗುಂಡಂಗೆರೆ	–	ಹೊಸಹಳ್ಳಿ
ಕೊಡಿಗೇಹಳ್ಳಿ	–	ಕನಕೇನಹಳ್ಳಿ